1773

ಕೋಲ್ಲಾರ ಡಿಸ್ಟ್ರಿಕ್ಟು.

ತಾರೀಖು 2ನೆ ನವಂಬರ್ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾವುಗಳು, ಸರ್ಕಾರಕ್ಕೆ ಬರಬೇಕಾದ ಬಾಕೀ ಮೊಬಲಗಿಗೋಸ್ಕರ ವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಡಿಸೆಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

1. ಜೋಡಿ ವಡಗೂರು-ಹುತ್ತೂರು ಹೋಬಳಿ—ಕೋಲಾರ ತಾಲ್ಲೂಕು.
2. ಜೋಡಿ ದಂಡಿಗಾನಹಳ್ಳಿ-ವಕ್ಕಲೇರಿ ಹೋಬಳಿ—ಕೋಲಾರ ತಾಲ್ಲೂಕು.
3. ಜೋಡಿ ದೊಡ್ಡಗಾಂಡ್ಲಹಳ್ಳಿ-ಕ್ಯಾಸಂಬಳ್ಳಿ ಹೋಬಳಿ—ಬವರಿಂಗ್‌ಪೇಟೆ ತಾಲ್ಲೂಕು.

(ಹೆಚ್ಚು ತಪಶೀಲ್ ಬಗ್ಯೆ 1904ನೆ ಮಾರ್ಚ್ಕಂ 45ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 619-620-621-622ನೆ ನಂಬರು ಪೇಜು ನೋಡತಕ್ಕದ್ದು.)

ಕೆ. ಏ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 149.

ಮೃತಪಟ್ಟ ಶಿವನೊಗ್ಗ ಡೆಪ್ಯುಟಿ ಕನ್ಸರ್ವೇಟರಾಗಿದ್ದ ವೆಂಕಟನಾರಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಎಡತೊರೆ ತಾಲ್ಲೂಕು ಮಂಚನಹಳ್ಳಿ ವಾಸಸ್ಥ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕನ್ಸರ್ವೇಟರ್ ವೆಂಕಟನಾರಣಪ್ಪನವರ ಮಗ ವೆಂಕಟಕೃಷ್ಣಪ್ಪ, ಮೃತಪಟ್ಟ ಸದರಿ ವೆಂಕಟನಾರಣಪ್ಪ ಎಂಬುವರಿಗೆ ಸ್ವೀಕೃತಪುತ್ರ ಆಗಬೇಕೆಂಬ ಹಕ್ಕುದಾರಿಯು ಮೇಲೆ ಮೇಲ್ಕಂಡ ಅರ್ಜೆದಾರ್ ವೆಂಕಟಕೃಷ್ಣಪ್ಪ ಎಂಬುವರು ಎಡತೊರೆ ತಾಲ್ಲೂಕು ಮಂಚನಹಳ್ಳಿ ವಾಸಸ್ಥರಾಗಿ ಮೃತಪಟ್ಟ ವೆಂಕಟನಾರಣಪ್ಪ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಕೃಷ್ಣಪ್ಪ ಎಂಬುವರ ಅರ್ಜಿಯನ್ನು ಸನ್ 1905ನೆ ಇಸವಿ ಜನವರಿ ತಿಂಗಳು ತಾರೀಖು 10 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ನವಂಬರು ತಿಂಗಳು 17ನೆ ತಾರೀಖಿನಲ್ಲಿ ಕೋರ್ಟರ್ ಮೊಹರಿನಿಂ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 170.

ಮೃತಪಟ್ಟ ಎಂ. ಎ. ತಿರುನಾರಣಾಚಾರ್ರ ಆಸ್ತೀ ವಿಷಯದಲ್ಲಿ —

ಅರ್ಜೀದಾರ್ರು ಎಂ. ಎ. ಶಿಂಗ್ರೈಯ್ಯಂಗಾರ್ರು, ಮೃತಪಟ್ಟ ಸದರೀ ಎಂ. ಎ. ತಿರುನಾರಣಾಚಾರ್ರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಲಿ ಬಂಗಳೂರು ವಾಸಸ್ಥರಾದ ಮೇಲ್ಕಂಡ ಎಂ. ಎ. ಶಿಂಗ್ರೈಯ್ಯಂಗಾರ್ರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಎಂ. ಎ. ತಿರುನಾರಣಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಎಂ. ಎ. ಶಿಂಗ್ರೈಯ್ಯಂಗಾರ್ರು ಎಂಬುವರ ಅರ್ಜಿಯನ್ನು ಸನ್ 1905ನೆ ಇಸವಿ ಜನವರಿ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಂ. ಎ. ತಿರುನಾರಣಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಪ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ನವಂಬರ ತಿಂಗಳು 17ನೆ ತಾರೀಖಿನಲ್ಲಿ ಕೋರ್ಟರ್ ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 171.

ಮೃತಪಟ್ಟ ವೆಂಕಟಮ್ಮ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1. ಮೈಸೂರು ಚಾಮರಾಜಪೇಟೇಲಿರುವ ಕಾಳ ವೆಂಕಟಪ್ಪನವರ ಮಗ ಕಾಳ ರಾಮಯ್ಯ, 2. ಬಂಗಳೂರು ಬಿನವನಗುಡಿ ಎಕ್ಸ್‌ಟೆರ್ಷನ್ನಲ್ಲಿರುವ 1ನೆ ಅರ್ಜೆದಾರ್ರ ಅಂಣ ಕಾಳಸುಬ್ಬಯ್ಯ ಮೃತಪಟ್ಟ ಸದರೀ ವೆಂಕಟಮ್ಮ ಎಂಬುವರಿಗೆ ವಿಭಕ್ತ ಮೈದುಂದರು ಆಗಬೇಕೆಂಬ ಹಕ್ಕುದಾರಿ ಮೇಲೆ 1ನೆ ಕಾಳರಾಮಯ್ಯ, 2ನೆ ಕಾಳಸುಬ್ಬಯ್ಯ ಎಂಬವರು ಮೈಸೂರು ವಾಸಸ್ಥರಾಗಿ ಮೃತಪಟ್ಟ ವೆಂಕಟಮ್ಮ ಎಂಬವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಕಾಳಿ ರಾಮಯ್ಯ, 2ನೆ ಕಾಳಿ ಸುಬ್ಬಯ್ಯ ಎಂಬುವರ ಅರ್ಜಿಯನ್ನು ಸ್ ಈ 1905ನೆ ಇಸವಿ ಜನವರಿ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಬವಮ್ಮಾ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1904ನೆ ಇಸವಿ ನವಂಬರ್ ತಿಂಗಳು 17ನೆ ತಾರೀಖಿನಲ್ಲಿ ಕೋರ್ಟು ವೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋ ಣಾಗಿದೆ.

ಸ್ ಈ 1904—1905ನೆ ಇಸವಿ ಮಿ|| ಅರ್ಜೀ ನಂಬರ್ 186.

ಮೃತಪಟ್ಟ ಕೆ. ಜಿ. ನಾರಾಯಣಸ್ವಾಮಿ ಅಯ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಚಲುವಾಂಬ ಆಗ್ರಹಾರದಲ್ಲಿ ಲಕ್ಷ್ಮಿನರಸಿಹ್ಮ ಶಾಸ್ತ್ರಿಗಳ ಮನೇಲಿ ಹಾಲಿ ವಾಸವಾಗಿರುವ ವಿಜಾ ನಾಕ್ಷಮ್ಮಾ ವೈನರ್, ಗಾರ್ಡಿಯರ್ ತಂದೆ ಕೆ. ವಿ. ನಾರಾಯಣಸ್ವಾಮಿ ಅಯ್ಯರ್‌ಎಂಬವರು ಮೃತಪಟ್ಟ ಸದರೀ ಕೆ. ಜಿ. ನಾರಾಯಣಸ್ವಾ ಮಿ ಅಯ್ಯರಿಗೆ ಎರಡನೆ ಹೆಂಡತಿಯು ತಂದೆ ಆಗಬೇಕೆಂಬ ಹಕ್ಕುದಾರಿಮೇಲೆ ಕೆ. ವಿ. ನಾರಾಯಣಸ್ವಾಮಿ ಅಯ್ಯರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಕೆ. ಜಿ. ನಾರಾಯಣಸ್ವಾಮಿ ಅಯ್ಯರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ಈ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆ. ವಿ. ನಾರಾಯಣಸ್ವಾಮಿ ಅಯ್ಯರ ಅರ್ಜಿಯನ್ನು ಸ್ ಈ 1904ನೆ ಇಸವಿ ಜನವರಿ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆ. ಜಿ. ನಾರಾಯಣಸ್ವಾಮಿ ಅಯ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1904ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ವೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋ ಣಾಗಿದೆ.

ಸ್ ಈ 1904—1905ನೆ ಇಸವಿ ಮಿ|| ಅರ್ಜೀ ನಂಬರ್ 187.

ಮೃತಪಟ್ಟ ಪಿ. ಸಿ. ದಿವ್ಯನಾದ ವೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ತಾಲ್ಲೂಕು ವರಕೂಡು ಹೋಬಳಿ ಲೇಟ್ ಕೇಕದಾರ್ ಪಿ. ಸಿ. ದಿವ್ಯನಾದ ವೊದಲಿಯಾರ್ರ ಮಗ ಡಿ. ಥೊಮಸ್ವಾಮಿ ವೈನರ್, ಗಾರ್ಡಿಯರ್ ತಾಯಿ ಸೂಸಿಯಮ್ಮಾಳ್ ಎಂಬುವರು, ಮೃತಪಟ್ಟ ಸದರೀ ಪಿ. ಸಿ. ದಿವ್ಯನಾದ ವೊದಲಿ ಯಾರ್‌ಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳಿದ ಮೇಲ್ಕಂಡ ಸೂಸಿಯಮ್ಮಾಳ್ ಎಂಬುವರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಪಿ. ಸಿ. ದಿವ್ಯನಾದ ವೊದಲಿಯಾರ್ರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡ ಸೂಸಿಯಮ್ಮಾಳ್ ಎಂಬುವರ ಅರ್ಜಿಯನ್ನು ಸ್ ಈ 1905ನೆ ಇಸವಿ ಜನವರಿ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಿ. ಸಿ. ದಿವ್ಯನಾದ ವೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯು ಪಡಿಸಿ ಇದೆ.

ಸ್ ಈ 1905ನೆ ಇಸವಿ ನವಂಬರ್ ತಿಂಗಳು 17ನೆ ತಾರೀಖಿನಲ್ಲಿ ಕೋರ್ಟು ವೊಹರಿನಿಂ ನಮ್ಮದಸ್ತಖತ್ತೊಡನೆ ಕೊಡೋ ಣಾಗಿದೆ.

ಟಿ. ಪರಮೇಶ್ವರ ಅಯ್ಯರ್,
ಸಬ್ ಜಡ್ಜ್.

ಚಿಕ್ಕಬಳ್ಳಾಪುರ ಮುನ್ಸಿಫ್ ಕೋರ್ಟಿನಲ್ಲಿ.

ಸ್ ಈ 1903—04ನೆ ಇಸವಿ ಮಿ|| ನಂಬರು 392.

ದಿವಾಳಿಯಾದ ಡಿಕ್ರಿ ದೇಣೇದಾರ ಚಿಕ್ಕಬಳ್ಳಾಪುರದಲ್ಲಿರುವ ವೆಂಕಟನರಸಿಹ್ಮಾಚಾರ್ಯರ ಮಕ್ಕಳು ನೆರಳಿಮರದ ಕೃಷ್ಣರಾಯರ ವಿಷಯದಲ್ಲಿ—

ಈ ವಿಷಯವು ಮುನಶೀಫ: A. ನರಸಿಹ್ಮಿಯ್ಯಂಗಾರ್, ಎಸ್ಕ್ವಯರ್, B. A., & B. L., ಯವರ ರೂಬರೂಬ್ ದಿವಾಳಿ ಯಾದವರ ಮತ್ತು ಅವರ ತರಫ: ಪ್ಲೀಡರ್ ಮೆ|| ವೀರಪ್ಪನವರ ಸಮಕ್ಷವದಲ್ಲಿಯೂ ಮತ್ತು ದಿವಾಳಿದಾರನ 1ನೆ ಲೇಣೇದಾರರಾದ ಭಾಸ್ಕರಪ್ಪನವರ ತರಫ: ಪ್ಲೀಡರ್ ಮೆ|| ಸೂರಪ್ಪನವರ ಯದೆಯಾಗಿಯೂ ಬಾಕಿ ಲೇಣೇದಾರರು ಗೈರ್ ಹಾಜರ್ ದರ್ಯಾಫ್ತ್ ಮಾಡ ಲ್ಪಟ್ಟ್ಯತು. ಮತ್ತು ಸ್ ಈ 1904ನೆ ಇಸವಿ ಅಕ್ಟೋಬರ್ 30ನೆ ತಾರೀಖಿನ ಬಾಬತು ರಿಸೀವರಾದ ಜೆ|| ಮುನಿಷಿ ಮೂರ್ತಿರಾಯರ ಸರಟಿಫಿಕೇಟ್ ಓದಲಾಯಿತು. ಇದೇ ವಿಷಯದಲ್ಲಿ ಸ್ ಈ 1904ನೆ ಇಸವಿ ಅಕ್ಟೋಬರು 14ನೆ ತಾರೀಖಿನಲ್ಲಿ ಈ ಕೋರ್ಟಿನಿಂದ

336

1278

ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟಿಯಲ್ಲಿ ಕಂಡ ಯಾವ ಸಾಲಗಳಿಗೂ ಐರ್ಜ ದಿವಾಳಿಯಾದವರನ್ನ ಎಲ್ಲಾ ಜವಾಬ್ದಾರಿಯಿಂದಲೂ ನಿಖಾಲಸ್ಮಾಡಿರುವದಲ್ಲದೆ ಆ ಬಗ್ಗೆ ಸದರೀಯವರನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ದೆಶೆಯಿಂದಲೂ ಬಿಡಗಡೇ ಮಾಡಿ ಇರುವದಾಗಿ ಇದರಿಂದ ಹುಕುಂ ಮಾಡಲ್ಪಟ್ಟು ಇಧೆ.

ಸ್ಯ 1904ನೆ ಇಸವಿ ನವಂಬರು 14ನೆ ತಾರೀಖಿನಲ್ಲಿ ಕೊರ್ಟು ಮೊಹರ್ ನಮ್ಮ ದಸ್ತಕತ್ತುನಿಸಿ ಕೊಡಲ್ಪಟ್ಟಿಧೆ.

ಸಾಲಗಳ ತಪಶೀಲ್.

ಜನರಲ್ ನಂಬರು	ಲೇಣಿದಾರರ ಹೆಸರು.	ಸಾಲದ ಮೊಬಲಗು. ರೂ.	ಆ.	ಪೈ.	ಸಾಲಗಳ ಸ್ವಭಾವ.
1	ಚಿಕ್ಕಬಳ್ಳಾಪುರ ಅದಾಲತ್ತು ಬ್ಯಾಂಕಿಗೆ ...	85	0	0	ಡಿಕ್ರಿ ಬಾಬತ್ತು.
2	ಡಿಟೋ ಡಿಟೋ ..	37	0	0	ಡಿಟೋ
3	ಡಿಟೋ ರಾಜಧಾನಿ ಬ್ಯಾಂಕಿಗೆ ..	30	0	0	ಡಿಟೋ
4	ಡಿಟೋ ಲಕ್ಷ್ಮಿಸಹಾಯದ ಬ್ಯಾಂಕಿಗೆ ...	25	0	0	ಡಿಟೋ
5	ಡಿಟೋ ಸುಬ್ರಮ್ಮಣ್ಣೇಶ್ವರಸ್ವಾಮಿ ಬ್ಯಾಂಕಿಗೆ ..	95	0	0	ಡಿಟೋ
6	ಡಿಟೋ ಕೋದಂಡರಾವುಸ್ವಾಮಿ ಬ್ಯಾಂಕಿಗೆ ...	50	0	0	ಡಿಟೋ
7	ಡಿಟೋ ಶುಭಾದಿಕರ್ಮಧನಾಭಿವೃದ್ಧಿ ಬ್ಯಾಂಕಿಗೆ ..	150	0	0	ಡಿಟೋ
8	ಡಿಟೋ ವೆಂಕಟರಮಣಸ್ವಾಮಿ ಬ್ಯಾಂಕಿಗೆ ..	70	0	0	ಡಿಟೋ
9	ಶ್ಯಾನಭೋಗ ಕೀನಪ್ಪನವರಿಗೆ ...	36	0	0	ಪತ್ರದ ಬಾಬತ್ತು.
	ಜುಮ್ಲಾ ..	578	0	0	

ಎ. ನರಸಿಹ್ಮಯ್ಯಂಗಾರ್,
ಮುನಸೀಫ್.

ನೋಟಿಸ್.

ತಾರೀಖು 11ನೆ ಅಕ್ಟೋಬರ್ 1904, ಕೃಷ್ಣರಾಜಪೇಟೆ.

ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ನಂತೆಬಾಚಹಳ್ಳಿ ಹೋಬಳಿ ಜೋಡಿ ಕೈಗೋನಹಳ್ಳಿ ಗ್ರಾಮದ ಸರ್ವೆ ಜಮಾಬಂದಿಯನ್ನು 1904ನೆ ಇಸವಿ ಡಿಸೆಂಬರ್ 3ನೆ ತಾರೀಖು ಶನಿವಾರ ಕೈಗೋನಹಳ್ಳಿ ಮೊಕ್ತಾಂನಲ್ಲಿ ನಡಿಸುತ್ತೆಂದು ಇದರಿಂದ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಆದಿವಸ ಗ್ರಾಮದ ಎಲ್ಲಾ ಜೋಡಿದಾರ್ರುಗಳು ಮತ್ತು ರೆ ತರುಗಳು ಸಹ ಈ ಕೆಳಗೆ ಸೈ ಮಾಡಿರುವವರ ಸಮಕ್ಷವು ಹಾಜರಾಗಬೇಕು.

ತಾರೀಖು 2ನೆ ನವಂಬರ್ 1904, ಕೃಷ್ಣರಾಜಪೇಟೆ.

ದೇವಾಂಖ ಅಗ್ರಹಾರದ ವೃತ್ತಿಗೆ ಸೇರಿದ ಗ್ರಾಮಗಳ ವಿಜಂಟೆ ವೆಂಕಟರಾಮಯ್ಯನವರಿಂದ ವೆಂಗಟನಾರಣಭಟ್ಟ ವಗೈರೇರ್ರಿಗೆ ಬರಬೇಕಾದ ಸುವರ್ಣಾದಾಯದ ಮೊಬಲಗು ವಿಚಾರದಲ್ಲಿ ಬಂದಿರುವ ಫಿರ್ಯಾದು ತನಿಖೆಯನ್ನು ಬರುವ ಡಿಸೆಂಬರು 13, 14 ಮತ್ತು 15ನೆ ತಾರೀಖುಗಳಲ್ಲಿ ಕೃಷ್ಣರಾಜಪೇಟೆ ಮೊಕ್ತಾಂನಲ್ಲಿ ನಮ್ಮ ರೂಬರೂಬ್ ವಿಚಾರಿಸಿ ವಿವರ್ಸ್ಥೆಪಡಿಸುತ್ತೆ.

ಬಾಕಿ ತಪಶೀಲ್‌ಗಳನ್ನು 1904ನೆ ಇಸವಿ 44ನೆ ನಂಬರ್ ಮೈಸೂರು ಗೆಜೆಟ್ಟಿನ 617ನೆ ಪುಟದ 2ನೆ ಭಾಗದಲ್ಲಿ ನೋಡಿ.

ಎ. ಸುಬ್ರಮ್ಮಣ್ಯ,
ಅಸಿಸ್ಟೆಂಟ್ ಕಮಿಷನರ್, ಕೃಷ್ಣರಾಜಪೇಟೆ ಡಿವೀರ್ಜ್.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ಈ ಕೆಳಗೆ ನಮೂದಿಸಿರುವ ಪುಸ್ತಕಗಳು ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ, ಬಿಕರಿಗೆ ಸಿದ್ಧವೇಗಿರುತ್ತವೆ. ಇದರ ಕ್ರಯ ಪ್ರತಿ 1ಕ್ಕೆ 4 ಆಣೆ.

ವ್ಯಾನ್ಯೂಯಲ್ ಆಫ್ ಹೈರ್ಜ್ ಎಂಬ ಪುಸ್ತಕವನ್ನ ಹಿಂದುಸ್ತಾನಿಯಲ್ಲಿ ಭಾಷಾಂತರ ಮಾಡಲ್ಪಟ್ಟಿರುವ "ರಹಣೂಮಾಯಿ ಸೇಹತ್" ಪುಸ್ತಕ.